**ಓ.ಎಸ್. 212/2016 ಪಿ.ಡಬ್ಲೂ-1 ಹೆಸರು – ಕಾರ್ತಿಕ್ ಎಂ ಎಲ್**

**ಸಾಕ್ಷಿಯನ್ನು ದಿನಾಂಕಃ 28.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕುಮಾರ್ ವಕೀಲರಿಂದಃ**

ನಾನು ಖರೀದಿ ಮಾಡುವ ಸಮಯದಲ್ಲಿ ದಾವಾ ಸ್ವತ್ತಿನ ಸರ್ವೆ ನಂ. 104/1 ಆಗಿತ್ತು. ದಾವಾ ಸ್ವತ್ತನ್ನು ಖರೀದಿಸುವ ಮುಂಚೆ ನಾನು ಹದ್ದುಬಸ್ತು ಸರ್ವೆ ಮಾಡಿಸಿಲ್ಲ. ನಾನು 2013, 2015 ರಲ್ಲಿ ಹದ್ದುಬಸ್ತು ಸರ್ವೆ ಮಾಡಿಸಿದ್ದೇನೆ. ಸರ್ವೆ ನಂ. 104 ಅನ್ನು ಸಂಪೂರ್ಣವಾಗಿ ಹದ್ದುಬಸ್ತು ಸರ್ವೆ ಮಾಡಿಸಲಾಗಿದೆ. ಆ ಸಮಯದಲ್ಲಿ ಆಜುಬಾಜುದಾರರಿಗೆ ನೋಟಿಸನ್ನು ನೀಡಲಾಗಿದೆ. ಸರ್ವೆ ನಂ. 104 ರಲ್ಲಿರುವಂತಹ ಇರುವವರಿಗೂ ನೋಟಿಸನ್ನು ಸರ್ವೆ ಇಲಾಖೆಯಿಂದ ನೀಡಲಾಗಿದೆ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು ಕೆ.ಐ.ಎ.ಡಿ.ಬಿ ಗೆ ನೋಟಿಸನ್ನು ನೀಡಿರುವುದಿಲ್ಲ. ಸರ್ವೆ ಮಾಡುವ ಸಮಯದಲ್ಲಿ ಇಲಾಖೆಯಿಂದ ನೋಟಿಸು ನೀಡಿದ್ದು, ನಾನು ನೋಟಿಸು ನೀಡಿರುವುದಿಲ್ಲ. ಕೆ.ಐ.ಎ.ಡಿ.ಬಿ ಯವರಿಗೆ ಆಸ್ತಿ ಎಲ್ಲಿದೆ ಎಂದು ತಿಳಿದುಕೊಳ್ಳುವ ಅಗತ್ಯ ನನಗೆ ಇಲ್ಲದಿರುವುದರಿಂದ ಆ ಬಗ್ಗೆ ವಿಚಾರ ಮಾಡಿಲ್ಲ. ಸರ್ವೆ ನಂ. 104/1, 104/3 ಆಗಿ ಪೋಡು ಆಗಿರುವ ಬಗ್ಗೆ ಆರ್.ಟಿ.ಸಿ ಯಿಂದ ತಿಳಿದು ಬಂದಿದ್ದು ಆ ರೀತಿ ಪೋಡು ಮಾಡಲು ನಾನು ಯಾವುದೇ ಅರ್ಜಿ ನೀಡಿರಲಿಲ್ಲ, ಇಲಾಖೆಯಿಂದಲೇ ಪೋಡು ಆಗಿರುತ್ತದೆ.

ದಾವಾ ಸ್ವತ್ತಿನ ದಕ್ಷಿಣಕ್ಕೆ ಊಟಿ ರಸ್ತೆ, ಉತ್ತರಕ್ಕೆ ಕೆ.ಐ.ಎ.ಡಿ.ಬಿ ರಸ್ತೆ ಎಂದರೆ ಸರಿ. ಪೂರ್ವಕ್ಕೆ ಬೆಂಗಳೂರು – ನೀಲಗಿರಿ ರಸ್ತೆ, ಪಶ್ಚಿಮಕ್ಕೆ ಕೆ.ಇ.ಬಿ ರಸ್ತೆ ಇದೆ ಎಂದರೆ ಸರಿ. ದಕ್ಷಿಣಕ್ಕೆ ಪೂರ್ವ ಮತ್ತು ಪಶ್ಚಿಮದ ರಸ್ತೆಯ ಜಂಕ್ಷನ್ ಎಂದರೆ ಸರಿ. ಮೇಲೆ ಹೇಳಿದ ಚೆಕ್ಕುಬಂದಿಯ ಮಧ್ಯದಲ್ಲಿರುವ ಸ್ವತ್ತು ಕೆ.ಐ.ಎ.ಡಿ.ಬಿ ಗೆ ಸೇರಿದಂತಹ ಸ್ವತ್ತು ಎಂದರೆ ಸರಿಯಲ್ಲ. ಮೇಲೆ ಹೇಳಿದ ಚೆಕ್ಕುಬಂದಿಯ ಮಧ್ಯದಲ್ಲಿರುವ ಸ್ವತ್ತು ದಾವಾ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತು ಕೆ.ಐ.ಎ.ಡಿ.ಬಿ ಗೆ ಸೇರಿದಂತಹ ಸ್ವತ್ತು ಎಂದರೆ ಸರಿಯಲ್ಲ.

ದಿಃ 24.03.1990 ರಂದು ಕೆ.ಐ.ಎ.ಡಿ.ಬಿ ರವರು ಪ್ರತಿವಾದಿಗೆ ಸದರಿ ಸ್ವತ್ತನ್ನು ಮಂಜೂರು ಮಾಡಿ ಸ್ವಾಧೀನ ನೀಡಿರುತ್ತಾರೆ ಎಂದರೆ ಸಾಕ್ಷಿ ಅದು ದಾವಾ ಸ್ವತ್ತು ಅಲ್ಲ ಬೇರೆ ಸ್ವತ್ತು ಎನ್ನುತ್ತಾರೆ. ಅಂದಿನಿಂದ ಪ್ರತಿವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಭೋಗದಲ್ಲಿದ್ದಾರೆ ಎಂದರೆ ಸರಿಯಲ್ಲ. ನಂತರ ಸದರಿ ಸ್ವತ್ತಿಗೆ ಪ್ರತಿವಾದಿ ಅನ್ಯಕ್ರಾಂತ ಮಾಡಿಸಿಕೊಂಡು ದೇಗೂರು ಗ್ರಾಮ ಪಂಚಾಯ್ತಿಯಲ್ಲಿ ಸದರಿ ಸ್ವತ್ತಿಗೆ ಪ್ರತಿವಾದಿಯ ಹೆಸರಿನಲ್ಲಿ ಅಸೆಸ್ ಮೆಂಟ್ ಇದೆ ಎಂದರೆ ಸರಿಯಲ್ಲ. ಪಂಚಾಯ್ತಿಯವರು ಅವರಿಗೆ ಆ ಸಂಬಂಧ ಫಾರ್ಮ್ ನಂ. 11 ಬಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇದ್ದರೂ

ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಾಯಿತ ಮದರ್ ಡೀಡ್ ಇದ್ದು ಅದು ಎಂತಹ ದಾಖಲೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮಾರಾಟಗಾರರಿಗೆ ಎಂದಿಗೂ ಹಕ್ಕು ಪ್ರಾಪ್ತವಾಗಿರಲಿಲ್ಲ ಎಂದರೆ ಸರಿಯಲ್ಲ.

ನಿ.ಪಿ. 8 ರ ಪ್ರಕಾರವಾಗಿ ನಮ್ಮ ಮಾರಾಟಗಾರರಿಗೆ ಅವರ ಮಾರಾಟಗಾರರು ದಾವಾ ಸ್ವತ್ತನ್ನು ಮಾರಾಟ ಮಾಡಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮಾರಾಟಗಾರರಿಗೂ ಹಾಗೂ ಅವರ ಮಾರಾಟಗಾರರಿಗೂ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗಳಿಗೆ ಕೆ.ಐ.ಎ.ಡಿ.ಬಿ ಯಿಂದ ಮಂಜೂರಾಗಿ ಬಂದಂತಹ ಸ್ವತ್ತಾಗಿದ್ದರಿಂದ ಅದಕ್ಕೆ ಅವರೇ ಹಕ್ಕುದಾರರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 104 ಪ್ರತಿವಾದಿಗಳಿಗೆ ಸೇರಿದ್ದು ಎಂದು ತಿಳಿದಿದ್ದರೂ ಸಹ ನಾಮಕಾವಸ್ತೆಯ ಕ್ರಯ ಪತ್ರವನ್ನು ಇಟ್ಟುಕೊಂಡು ಅವರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ ಎಂದರೆ ಸರಿ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**
**ನಂಜನಗೂಡು**